ಕೂಡಾ ನೆನಪಿರಲಿಲ್ಲ. ಕನ್ನಡಿಯ ಮುಂದೆ ನಿಂತಾಗಲೆಲ್ಲಾ ಹಿಂದಿನಿಂದ ಅವನಮ್ಮ ಹೇಳುತ್ತಿದ್ದ ಮಾತು, 'ಅಪ್ರದ್ದೇ ಮುಖ!' ಕೇಳುವಾಗೆಲ್ಲಾ ಯಾಕೆಂದು ಅರ್ಥವಾಗದೇ ಇರುಸುಮುರುಸಾಗುತ್ತಿದ್ದದ್ದೇ ಹೆಚ್ಚು. ತಾನು ಕಂಡರಿಯದ ತನ್ನಪ್ಪಯ್ಯನ ಮುಖ ಚಹರೆ ಹೊತ್ತು ತಿರುಗುವ ನೆನಪೂ ಅವನಿಗೆ ಭಾರವೆನ್ನಿಸುತ್ತಿತ್ತು. ತನ್ನನುಭವಕ್ಕೆ ಎಂದೂ ಬಾರದ ಗತ ವೈಭವದ ಬಾಳಿಗೆ ಇತಿಹಾಸದ ಲೇಪ ಹಚ್ಚಿ ತನ್ನನ್ನು ಗುರುತಿಸುತ್ತಿದ್ದವರನ್ನು ಕಂಡರಂತೂ ಇನ್ನಿಲ್ಲದಷ್ಟು ರೇಜಿಗೆಯಾಗುತ್ತಿತ್ತು. ವೈದೇಹಿ ಕೂಡಾ ಅವರಿವರು ಹೇಳುವ ತಮ್ಮ ಮನೆತನದ ಕತೆಯನ್ನು ತಾನೇ ಕಂಡವಳಂತೆ ಹೇಳುತ್ತಿದ್ದದ್ದೂ ಕೂಡಾ ಅವನಿಗೆ ಹೊಸತೇನಾಗಿರಲಿಲ್ಲ. ತನಗೆ ತಿಳಿಯದ, ತಾನೆಂದೂ ಕಂಡಿರದ ತಾನು ಹೊಕ್ಕ ಮನೆಯ ಕತೆಯನ್ನು ಅವಳ್ಯಾಕೆ ಅಷ್ಟು ಆವಾಹಿಸಿಕೊಂಡವಳಂತೆ ಹೇಳುತ್ತಾ ತನ್ನ ಜೀವನವನ್ನೇ ಮುಡಿಪಿಟ್ಟಿದ್ದಾಳೋ ಶ್ರೀಪಾದನಿಗೆ ಕಡೆವರೆಗೂ ನಿಗೂಢವಾಗಿಯೇ ಉಳಿದುಹೋಗಿತ್ತು.

ಇಷ್ಟು ವರುಷದ ಮೇಲೂ ಅವನಿಗೆ ಸರಿಯಾಗಿ ನೆನಪಿರುವುದೆಂದರೆ ಅಪ್ಪಯ್ಯ ಸತ್ತ ನಂತರದ ಬದುಕಷ್ಟೇ. ಅವನು ಕಂಡಿದ್ದೇನಿದ್ದರೂ ನಸುಕಿನಲ್ಲಿ ಅಮ್ಮ ಅವನನ್ನೆಬ್ಬಿಸಿ, ಬೇಗ ಸ್ನಾನ ಮಾಡಿಸಿ, ಅವರಿವರ ಮನೆಯಲ್ಲಿ ಅವನನ್ನಿಟ್ಟು ಬೆಳಗ್ಗೆ ಶಾಲೆಗೆ ಓಡಿದರೆ ಸಂಜೆವರೆಗೂ ತಾನು ಅಮ್ಮನ ದಾರಿ ಕಾಯುತ್ತಾ ಯಾರದ್ದೋ ಮನೆಯ ಚಿಟ್ಟೆಯೇರಿ ಕಣ್ಣಲ್ಲಿ ನೀರು ತುಂಬಿಕೊಂಡು ಕಾಯುತ್ತಿದ್ದ ನೆನಪು. ಒಂದು ಶಾಲೆಯಲ್ಲಿ ಟೀಚರಾಗಿ ದುಡಿಯುತ್ತಿದ್ದ ಅಮ್ಮ, ಆರು ವರುಷವಾಗುತ್ತಿದ್ದಂತೇ ಅವನನ್ನೂ ಕಂಕುಳಲ್ಲಿ ಚಚ್ಚಿಕೊಂಡು ಧುಮುಧುಮುಯೆಂದು ಮೈಲು ದೂರದ ಶಾಲೆಗೆ ಓಡೋಡುತ್ತಾ ದೌಡಾಯಿಸುತ್ತಿದ್ದರೆನ್ನುವ ನೆನಪು. ಮಳೆಗೆ ಸೋರುವ ಹಂಚಿನಡಿ ಇದ್ದಬದ್ದ ಪಾತ್ರೆಗಳನ್ನಿಡುತ್ತಾ, ಭಾನುವಾರದ ಮಬ್ಬು ಮಧ್ಯಾಹ್ನಗಳಲ್ಲಿ ಹರಿದ ಅವನಂಗಿಗೆ ಹಳೇ ತುಂಡನ್ನು ಕತ್ತರಿಸಿ ತೂತಕ್ಕೆ ಮುಚ್ಚಿ ಹೊಲೆಯುತ್ತಾ ಮುಂಚೇಗಡೆ ಕಟ್ಟೆಯಲ್ಲಿ ಅಮ್ಮನಿಗೊರಗಿ, ಮಾಡಿನಿಂದ ಧಾರೆಯಾಗಿ ಸುರಿವ ಮಳೆಗೆ ಕಣ್ಣು ನೆಟ್ಟು, ಸ್ವಗತದಂತೆ ಮೂಡುತ್ತಿದ್ದ ಕತೆಯೊಂದನ್ನು ಅನ್ಯಮನಸ್ಕನಾಗಿ ಕೇಳುತ್ತಾ ನಿದ್ರೆ ಹೋಗುತ್ತಿದ್ದದ್ದು ಬಿಟ್ಟರೆ ಅಪ್ಪಯ್ಯನೆಂದೂ ಕಣ್ಣೆದುರು ನಿಂತಿದ್ದು ನೆನಪಿರಲಿಲ್ಲ.

ಬಾಗಿಲ ಹಿಂದೆ, ಏಣಿ ಮೆಟ್ಟಿಲಡಿ, ಚಿಟ್ಟೆಯ ಕಟ್ಟೆಯ ಮರೆಯಲ್ಲಿ ಮುದುರಿ ಕುಳಿತು ಬೆಳೆದ ಅವನಿಗೆ ನೆನಪು ಚೆಂದಿಯಾಗಿ ಹಿಂಡಿದಷ್ಟೂ ವ್ಯಾಕುಲಗೊಳ್ಳುತ್ತಿದ್ದ. ಯಾಕೋ ಬಾಲ್ಯದ ಈ ಯಾವ ನೆನಪೂ ಮಧುರ ಅನುಭೂತಿಯಾಗಿರಲಿಲ್ಲ.

ದೊಡ್ಡಪ್ಪಯ್ಯನ ಮನೆಯೆಂದರೆ ಚಿಕ್ಕವನಿದ್ದಾಗ ವರುಷಕ್ಕೆರೆಡು ಬಾರಿ ಅಮ್ಮನ ಕೈ ಹಿಡಿದು ಅಜ್ಜಯ್ಯನದ್ದೋ, ಅಜ್ಜಿಯದ್ದೋ ವೈದಿಕಕ್ಕೆ ಬಾರ್ಕೂರಿಗೆ ಹೋಗುತ್ತಿದ್ದದ್ದಷ್ಟೇ. ಬಾರ್ಕೂರಿನಿಂದ ಹನ್ನೆರಡು ಮೈಲಿ ದೂರದಲ್ಲಿ ತೀರ್ಥಳ್ಳಿಗೆ ಹತ್ತಿರ ಅಪ್ಪಯ್ಯ ಮನೆ ಮಾಡಿದ್ದು ಕೂಡಾ ತಮ್ಮ ರಾಜಕೀಯ ಚಟುವಟಿಕೆಗೆಂದು ಅಮ್ಮ ಹೇಳುವುದಷ್ಟೇ ಗೊತ್ತಿತ್ತು. ಪಿತ್ರಾರ್ಜಿತವಾಗಿ ಬಂದ ಈ ಪಾಳು ಮನೆಯನ್ನು ಊರ್ಜಿತಗೊಳಿಸಬೇಕಾದರೆ ಸಾಕಷ್ಟು ದುಡ್ಡು ಕೈ ಬಿಟ್ಟು ಹೋಯಿತೆನ್ನುವುದು ಅವನು ಸೋರುವ ಮಾಡು ನೋಡುತ್ತಾ ಕುಳಿತಾಗೆಲ್ಲಾ ವೈದೇಹಿ ಹೇಳುವ ಗತ ಬದುಕಿನ ತುಣುಕದು. ಆದರೂ ಮಾಡ್ಯಾಕೆ ಸೋರುತ್ತಿದೆಯೆಂದು ಅವನಿಗೆಂದೂ ಅರ್ಥವಾಗುತ್ತಿರಲಿಲ್ಲ.

'ಹಳೇಗಾಲದ ಅಷ್ಟ್ ದೊಡ್ ಮನಿ, ಆಸ್ತಿ, ಜಮೀನು, ತ್ವಾಟ ಯೆಂತೂ ಬೇಡಾಂತ ಬರುಕೊಟ್ಟು ಬರಿಗೈ ದಾಸರ ಕಣಂಗೆ ಮನೆ ಬಿಟ್ ಬಂದುದಲ್ಲನಾ ನಿಮ್ಮಪ್ಪಯ್ಯ!'

ಅವಳು ಅಭಿಮಾನದಿಂದ ಹೇಳುತ್ತಿದ್ದಳೋ, ನೋವಿನಿಂದಲೋ ಅವನಿಗೆಂದೂ ತಿಳಿಯುತ್ತಿರಲಿಲ್ಲ. ಇಂತಹ ಮಾತುಗಳನ್ನೆಲ್ಲಾ ಅವನು ಅನುಮಾನದಿಂದಲೇ ಕೇಳುತ್ತಾ ಬೆಳೆದಿದ್ದ.

ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳೇ ಕಳೆದ ನಂತರ, ಅಪ್ಪಯ್ಯ ಅಮ್ಮನನ್ನು ಮದುವೆಯಾಗಿದ್ದಂತೆ, ತೀರಾ ತಡವಾಗಿ! ಆದರೆ, ಸ್ವಾತಂತ್ರ್ಯದ ಬಯಕೆಯೊಂದು ಅವರಲ್ಲಿ ಹಾಗೇ ಉಳಿದುಬಿಟ್ಟಿತ್ತಂತೆ!